# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti Belagavi – 591156

E-mail: rcuregistrar@gmail.com
rcubacademic2010@gmail.com

Phone: 0831-2565257/34
Website: www.rcub.ac.in

ಕುಲಸಚಿವರ ಕಾರ್ಯಾಲಯ


ಪತ್ರ ಸಂ.: ರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳ/2021-22 / 2853 ದಿನಾಂಕ: 8 OCT 2021

## ಸುತ್ತೋಲೆ

**ವಿಷಯ:** 2021–22 ನೇ ಶೈಕ್ಷಣಿಕ ಸಾಲಿನ ಸ್ನಾತಕ ಎರಡು ವರ್ಷದ ಬಿ.ಇಡಿ (B.Ed) ಕೋರ್ಸಿಗಾಗಿ ಆಡಳಿತ ಮಂಡಳಿ ಮೀಸಲಾತಿ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸುವ ಕುರಿತು.

**ಉಲ್ಲೇಖ:**1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಸಿಎಸಿ–5/ಬಿ.ಇಡಿ/ದಾಖಲಾತಿ/2021–22, ದಿನಾಂಕ:23–09–2021
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07–10–2021

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಯೋಜಿತ ಸ್ನಾತಕ ಬಿ.ಇಡಿ (B.Ed) ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2021–22 ನೇ ಸಾಲಿನ ಸ್ನಾತಕ ಬಿ.ಇಡಿ (B.Ed) ಕೋರ್ಸಿನ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ (Management) ಕೋಟಾದಲ್ಲಿ ವಿಶ್ವವಿದ್ಯಾಲಯದ ಹಾಗೂ ಸರಕಾರದ ನಿಯಮಾವಳಿಗಳನ್ವಯ ಸೀಟು ಹಂಚಿಕೆ ಪ್ರವೇಶಾತಿ ಪ್ರಕ್ರಿಯೆಯನ್ನು **ದಿನಾಂಕ:25–10–2021 (ಸೋಮವಾರ) ದಿಂದ** ಈ ಕೆಳಗಿನ ನಿಬಂಧನೆ ಅನುಸಾರವಾಗಿ ಪ್ರವೇಶಾತಿ ಪಡೆದುಕೊಳ್ಳತಕ್ಕದ್ದು.

### ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಅಂಶಗಳು

1) **ದಿನಾಂಕ:25–10–2021 (ಸೋಮವಾರ)** ರಿಂದ ಪ್ರವೇಶ ಬಯಸುವ ವಿದ್ಯಾರ್ಥಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆನ್–ಲೈನ್ (Admission Portal) ಮೂಲಕ ಬಿ.ಇಡಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶವನ್ನು ಪಡೆದುಕೊಳ್ಳಬಹುದಾಗಿದೆ.
2) ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮಹಿಳಾ ವಿಶ್ವವಿದ್ಯಾಲಯವನ್ನು ಹೊರತು ಪಡಿಸಿ, UGC ಯಿಂದ ಮಾನ್ಯತೆ ಹೊಂದಿದ ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕೇತರ ವಿಶ್ವವಿದ್ಯಾಲಯಗಳ ಅಭ್ಯರ್ಥಿಗಳಿಂದ ಅರ್ಹತಾ ಪ್ರಮಾಣ ಪತ್ರಗಳನ್ನು (Eligibility Certificate) ಕಡ್ಡಾಯವಾಗಿ ಪ್ರವೇಶ ಪ್ರಕ್ರೀಯೆ ಮುಂಚಿತವಾಗಿ ಪಡೆದುಕೊಂಡು, ಪ್ರವೇಶಗಳನ್ನು ಪಡೆದುಕೊಳ್ಳಬೇಕು. **2021–22 ನೇ ಸಾಲಿನಿಂದ ಅರ್ಹತಾ ಪ್ರಮಾಣ ಪತ್ರದ ಶುಲ್ಕ ರೂ:2,500/- ಗಳನ್ನಾಗಿ ಶುಲ್ಕ ಪರಿಷ್ಕರಿಸಲಾಗಿದೆ.**
3) **ದಿನಾಂಕ:25–10–2021 (ಸೋಮವಾರ)** ರಿಂದ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಲ್ಲಿ ಬಿ.ಇಡಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರವನ್ನು ನೀಡಲಾಗುವುದು.
4) UGC ಯಿಂದ ಮಾನ್ಯತ ಹೊಂದಿದ ವಿಶ್ವವಿದ್ಯಾಲಯದ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಶೇಕಡಾ 45% ಅಂಕಗಳು ಮತ್ತು ಇತರ ಅಭ್ಯರ್ಥಿಗಳು ಆಂತರಿಕ ಅಂಕ ಸೇರಿ ಕನಿಷ್ಟ ಶೇಕಡಾ 50% ಅಂಕ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಪ್ರವೇಶಾತಿಗೆ ಪರಿಗಣಿಸತಕ್ಕದ್ದು.
5) UGC ಯ ಮಾನ್ಯತೆ ಬಗ್ಗೆ ವಿಶ್ವವಿದ್ಯಾಲಯಕ್ಕೆ ಅನುಮಾನ ಬಂದರೆ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಕಳುಹಿಸಿ ಮಾನ್ಯತೆ ಹಾಗೂ ಅಂಕಪಟ್ಟಿಗಳ ಬಗ್ಗೆ ಪರಿಶೀಲನೆಗೊಳಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು.
6) ಒಂದು ವೇಳೆ UGC ಯಿಂದ ಮಾನ್ಯತೆ ಹೊಂದಿರದ ವಿಶ್ವವಿದ್ಯಾಲಯಗಳಲ್ಲಿ ಪದವಿ/ಸ್ನಾತಕೋತ್ತರ ಪದವಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ.
7) ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶ ಪಡೆದುಕೊಂಡಿರುವುದು ಕಂಡು ಬಂದಲ್ಲಿ ರಾ.ಚ.ವಿ. ಸ್ನಾತಕ ಕೋರ್ಸಿನ ನಿಯಮಾವಳಿ ಪ್ರಕಾರ, ಪ್ರತಿ ವಿದ್ಯಾರ್ಥಿಗೆ ರೂ. 3,000/– ರಂತೆ ದಂಡವನ್ನು ಮತ್ತು ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಗೆ ಪ್ರತಿ ವಿದ್ಯಾರ್ಥಿಯಂತೆ ರೂ. 3,000/– ದಂಡದ ಹಣವನ್ನು ಮತ್ತು ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ಪತ್ರದ ಶುಲ್ಕ ರೂ:2,500/–ಗಳನ್ನು ಆಕರಣೆ ಮಾಡಲಾಗುವುದು. ಇದಕ್ಕೆ ತಪ್ಪಿದ್ದಲ್ಲಿ ಪ್ರವೇಶವನ್ನು ರದ್ದುಪಡಿಸಲಾಗುವುದು.

8) ಪ್ರವೇಶಾತಿಯನ್ನು ಮೆರಿಟ ಕಮ್-ರೋಸ್ಟರ ಅನುಗುಣವಾಗಿ ನಡೆಸಬೇಕು.

**9) 2021-22 ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಮತ್ತು ಶೈಕ್ಷಣಿಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ನಿಗದಿಪಡಿಸಿದ ಶೈಕ್ಷಣಿಕ ವೇಳಾಪಟ್ಟಿಂತೆಯೇ ನಡೆಸತಕ್ಕದ್ದು.**

10) NCTE/ನ್ಯಾಯಾಲಯದ ಆದೇಶಗಳು/ಉನ್ನತ ಶಿಕ್ಷಣ ಇಲಾಖೆ/ಮತ್ತು ವಿಶ್ವವಿದ್ಯಾಲಯದ ಆದೇಶಗಳನ್ನು ಪಾಲಿಸತಕ್ಕದ್ದು.

11) ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಣೆ ಸಂಖ್ಯೆ:ಸಿಎಸ್‌ಸಿ-5/ಬಿ.ಇಡಿ/ದಾಖಲಾತಿ/2021-22 ದಿನಾಂಕ:23-09-2021 ರನ್ವಯ ಪ್ರವೇಶಾತಿ ನಿಯಮವನ್ನು ಆಡಳಿತ ಮಂಡಳಿ ಮೀಸಲಾತಿಗೆ (Management Quota) ಪಾಲಿಸುವುದು.

**12) ಸರಕಾರದಿಂದ ಅನುಮತಿ ಪಡೆದುಕೊಂಡು ಬರುವ ಶಾಲಾ ಶಿಕ್ಷಕರ ಯಾದಿ ಸಿದ್ದಮಾಡಿಕೊಂಡು ಪ್ರವೇಶ ಪಡೆಯುವ ಪೂರ್ವದಲ್ಲಿ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದುಕೊಳ್ಳಬೇಕು.**

**13) ನಿಗದಿಪಡಿಸಿದ ಪ್ರವೇಶ ಮಿತಿಯೊಳಗೆ ಪ್ರವೇಶ ಪಡೆಯತಕ್ಕದ್ದು, ಪ್ರವೇಶ ಮಿತಿಯನ್ನು ಉಲ್ಲಂಘನೆ ಮಾಡಬಾರದು**

**14) ಖಾಲಿ ಉಳಿದ ಸರಕಾರದ ಸೀಟುಗಳನ್ನು ಸರಕಾರದ ಪತ್ರ ಮತ್ತು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಭರ್ತಿ ಮಾಡಬಾರದು.**

15) ವಿಶ್ವವಿದ್ಯಾಲಯದ ಪ್ರವೇಶ ಶುಲ್ಕದ ಅಧಿಸೂಚನೆಯಂತೆ ನೊಂದಣಿ ಶುಲ್ಕ ಮತ್ತು ಇತರೆ ಶುಲ್ಕವನ್ನು ನಿಗದಿತ ಅವಧಿಯಲ್ಲಿ ಭರಸಿ, ಆನ್-ಲೈನ್ (Admission Portal) ಮೂಲಕ ಪ್ರವೇಶವನ್ನು ಪಡೆದುಕೊಳ್ಳಬಹುದಾಗಿದೆ.

16) ವಿಶ್ವವಿದ್ಯಾಲಯವು ನಿಗದಿ ಪಡಿಸಿದ ದಿನಾಂಕದಂದು ಸರಕಾರಿ/ಆಡಳಿತ ಮಂಡಳಿಯಲ್ಲಿ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಆನ್-ಲೈನ್ ಪ್ರತಿಗಳನ್ನು ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸುವುದು.

17) ವಿದ್ಯಾರ್ಥಿಗಳು ಲಿಖಿತವಾಗಿ ಆಯ್ಕೆ ಮಾಡಿಕೊಂಡ ಬೋಧನಾ ವಿಷಯಗಳ ತರಗತಿಗಳಿಗೆ ಮಾತ್ರ ಹಾಜರಪಡಿಸಿಕೊಳ್ಳುವುದು.

18) ರಾಚವಿ ವೈಬ್‌ಸೈಟನಲ್ಲಿ ಅಳವಡಿಸಿದ ಸ್ನಾತಕ B.Ed ಕೋರ್ಸಗಳ ಪಠ್ಯಕ್ರಮಗಳನ್ನೇ ಕಡ್ಡಾಯವಾಗಿ ತರಗತಿಗಳಲ್ಲಿ ಬೋಧಿಸುವುದು.

19) ಪ್ರತಿ ವಿದ್ಯಾರ್ಥಿಯ ಹಾಜರಾತಿಯು ಶೇಕಡಾ 85% ರಷ್ಟು ಪೂರೈಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದರ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸುವುದು. ಹಾಗೂ ಹಾಜರಾತಿ ಕೊರತೆ ಉಂಟಾದಲ್ಲಿ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ನಿಯಮಾವಳಿ ಪ್ರಕಾರ ಅವಕಾಶ ನೀಡುವುದಿಲ್ಲ.

20) ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು ಭರ್ತಿ ಮಾಡುವಾಗ ಯಾವುದೇ ತಪ್ಪುಗಳನ್ನು ಮಾಡದೇ ಸರಿಯಾಗಿ ಭರ್ತಿ ಮಾಡತಕ್ಕದ್ದು ಹಾಗೂ ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿ ಮಾಡಿದ್ದಲ್ಲಿ ಮುಂದಿನ ಎಲ್ಲ ಆಗುಹೋಗುಗಳಿಗೆ ವಿದ್ಯಾರ್ಥಿಗಳೇ ನೇರ ಜವಾಬ್ದಾರನ್ನಾಗಿ ಮಾಡಲಾಗುವುದು.

21) ವಿಶ್ವವಿದ್ಯಾಲಯದ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

22) ಪರೀಕ್ಷೆಗೆ ಸಂಬಂಧಪಟ್ಟ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

23) 2021-22 ನೇ ಸಾಲಿನ ಪ್ರವೇಶ ನಿಯಮಾವಳಿ ಅನುಗುಣವಾಗಿ ಪ್ರವೇಶ ಪಡೆಯುವುದು.

24) ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in ವೈಬ-ಸೈಟನ್ನು ನೋಡತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಕಚೇರಿ ದೂರವಾಣಿ ಸಂಖ್ಯೆ:**0831-2565234** ಯನ್ನು ಸಂಪರ್ಕಿಸುವುದು.

**ವಿಶೇಷ ಸೂಚನೆ:** **1)ಚೌಸನ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ (4252) 2) ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ನಿಪ್ಪಾಣಿ (4291) 3) ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ (5244) ಈ ಶಿಕ್ಷಣ ಮಹಾವಿದ್ಯಾಲಯಗಳಿಗೆ ಈ ಸುತ್ತೋಲೆ/ಪ್ರವೇಶಾತಿ 2021-22 ನೇ ಸಾಲಿಗೆ ಅನ್ವಯಿಸಿರುವುದಿಲ್ಲ ಎಂದು ಸೂಚಿಸಲಾಗಿದೆ.**

ಕುಲಸಚಿವರು

**ಕುಲಸಚಿವರು**
**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ**
**ವಿದ್ಯಾ ಸಂಗಮ**
**ಬೆಳಗಾವಿ-೫೯೧೧೫೬, ಕರ್ನಾಟಕ**

**ಲಗತ್ತು: 2021-22 ನೇ ಸಾಲಿನ ಪ್ರವೇಶಾತಿ ಶುಲ್ಕಗಳ ಅಧಿಸೂಚನೆ ಪ್ರತಿ**

**ಇವರಿಗೆ,**

1) ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿರುವ ಒಟ್ಟು 49 ಸಂಯೋಜಿತ ಬಿ.ಇಡಿ (B.Ed) ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.

2) 1)ಚೌಸನ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕೋಡಿ (4252) 2)ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ನಿಪ್ಪಾಣಿ (4291) 3)ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ (5244) ಈ ಮೂರು ಶಿಕ್ಷಣ ಸಂಸ್ಥೆಗಳನ್ನು **2021-22 ನೇ ಸಾಲಿನ ಪ್ರವೇಶಾತಿಯಿಂದ ಹೊರತುಪಡಿಸಲಾಗಿದೆ.**

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti Belagavi – 591156

E-mail: rcuregistrar@gmail.com
rcubacademic2010@gmail.com

Phone: 0831-2565257/34
Website: www.rcub.ac.in

**ಕುಲಸಚಿವರ ಕಾರ್ಯಾಲಯ**

ಪತ್ರ ಸಂ.: ರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳ/2021-22/2853    ದಿನಾಂಕ 08-10-2021

## ಅಧಿಸೂಚನೆ

**ವಿಷಯ:**2021–22 ಸಾಲಿನಿಂದ B.Ed ಕೋರ್ಸ್‌ಗೆ ನೊಂದಣಿ/ಇತರೆ ಶುಲ್ಕವನ್ನು ಆಕರಣೆ ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07–10–2021

**ಪ್ರವೇಶ ನೀಡುವಾಗ ಈ ಕೆಳಗೆ ನಮೂದಿಸಿದ ಶುಲ್ಕವನ್ನು ಆಕರಿಸುವುದು**

| UG COURSES | GM/OBC | | SC/ST | | Cat-I | |
|---|---|---|---|---|---|---|
| | Registration Fee | Other Fee | Registration Fee | Other Fee | Registration Fee | Other Fee |
| Under Graduate Professional Courses (B.Ed) | **Budget Head** No:201 **Rs:2,000.00** | **Budget Head Nos** 406, 218, 205, 811, 216 206, 813, 214, 217, 409 **Rs:1200.00** | **Budget Head** No:201 **Rs:1000.00** | **Budget Head Nos** 406, 218, 205, 811, 216 206, 813, 214, 217, 409 **Rs:600.00** | **Budget Head** No:201 **Rs:1000.00** | **Budget Head Nos** 406, 218, 205, 811, 216 206, 813, 214, 217, 409 **Rs:1200.00** |
| | **Total Rs:3,200/-** | | **Total Rs:1,600/-** | | **Total Rs:2,200/-** | |

**ಇತರೆ ಶುಲ್ಕಗಳ ವಿವರಣೆ:**

| ಅ. ಸಂ | Other Fees /ಇತರೆ ಶುಲ್ಕ ವಿವರಣೆ | ಲೆಕ್ಕ ಶೀರ್ಷಿಕೆ ಸಂಖ್ಯೆ/ Budget Head No. | GM/OBC Cat-I | SC/ST |
|---|---|---|---|---|
| 1 | College Development Council Fund<br>ಕಾಲೇಜು ಅಭಿವೃದ್ಧಿ ಸಮಿತಿ ನಿಧಿ | 406 | 60.00 | 30.00 |
| 2 | Career Guidance Service Fund<br>ಉದ್ಯೋಗ ಮಾರ್ಗದರ್ಶಿ ಸೇವಾ ನಿಧಿ | 218 | 60.00 | 30.00 |
| 3 | Sports Fees<br>ಕ್ರೀಡಾ ಶುಲ್ಕ | 205 | 120.00 | 60.00 |
| 4 | Sports Development Fund<br>ಕ್ರೀಡಾ ಅಭಿವೃದ್ಧಿ ನಿಧಿ | 811 | 120.00 | 60.00 |
| 5 | Rani Channamma University, Development Fund<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಭಿವೃದ್ಧಿ ನಿಧಿ | 216 | 140.00 | 70.00 |
| 6 | Poor students aid fund<br>ಬಡ ವಿದ್ಯಾರ್ಥಿಗಳ ನೆರವು ನಿಧಿ | 206 | 60.00 | 30.00 |
| 7 | Youth Festival fund<br>ಯುವಜನತ್ಸೋವ ನಿಧಿ | 813 | 120.00 | 60.00 |
| 8 | Rani Channamma University Students's Benefit Scheme (RCUSBS) ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಯೋಜನೆ | 214 | 60.00 | 30.00 |
| 9 | Students Welfare Fund<br>ವಿದ್ಯಾರ್ಥಿ ಕಲ್ಯಾಣ ನಿಧಿ | 217 | 60.00 | --- |
| 10 | **Miscellaneous Fees** | 409 | 100.00<br>300.00 | 70.00<br>160.00 |
| | | **Total Other Fees** | **Rs:1200/-** | **Rs:600/-** |

**ಟಿಪ್ಪಣಿ:**

1. College Should retain Rs. 5/- per Candidate for Students Welfare activities ಪ್ರತಿ ಕಾಲೇಜು ತಾನು ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸಿದ ಹಣದಲ್ಲಿ ರೂ.5/– ಗಳನ್ನು ವಿದ್ಯಾರ್ಥಿಕಲ್ಯಾಣ ಕಾರ್ಯಕ್ರಮಕ್ಕಾಗಿ ಮುರುಗಡೆ ಮಾಡಿ ಉಪಯೋಗಿಸುವುದು.
2. Exemption for SC & ST Students ಕೇವಲ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಮಾತ್ರ ಇದಕ್ಕೆ ರಿಯಾಯಿತಿ ಉಂಟು.

ಕುಲಸಚಿವರು

ಕುಲಸಚಿವರು
ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ
ಬೆಳಗಾವಿ-591156, ಕರ್ನಾಟಕ

**ಇವರಿಗೆ,**

ಪ್ರಾಶುಂಪಾಲರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ.